ಕರ್ನಾಟಕ ಸರ್ಕಾರ

# ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕರು(ಆಡಳಿತ) ರವರ ಕಾರ್ಯಾಲಯ ಕಲಬುರಗಿ

ಸಂಖ್ಯೆ:ಅ1/ಆಡಳಿತ/ಪ್ರಾಶಾಶಿ/ಬಡ್ತಿ/69/2019-20

ದಿನಾಂಕ:11-02-2020

## ಅಧಿಸೂಚನೆ

ವಿಷಯ:-ಕಲಬುರಗಿ ಜಿಲ್ಲೆಯ ವ್ಯಾಪ್ತಿಯ ಸರಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ***ಮರಾಠಿ ಮಾಧ್ಯಮ*** ವೃಂದದ ಶಿಕ್ಷಕರ ದಿನಾಂಕ:01-01-2020 ರಲ್ಲಿದ್ದಂತೆ ಮೇರಿಟ್ ಆಧಾರದ ಮೇರೆಗೆ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಕುರಿತು.

ಉಲ್ಲೇಖ:-1)ಕರ್ನಾಟಕ ಸರ್ಕಾರಿ ನೌಕರರ(ಜೇಷ್ಠತಾ)ನಿಯಮಗಳು 1957 ನಿಯಮ(5) ರಂತೆ.

2)ಸರ್ಕಾರಿ ಪತ್ರ ಸಂಖ್ಯೆ:ಇಡಿ 202 ಎಸ್‌ಎಲ್‌ಬಿ 2014 ದಿನಾಂಕ:20-05-2014.

3)ಸರ್ಕಾರಿ ಪತ್ರ ಸಂಖ್ಯೆ:ಇಡಿ 152 ಎಲ್‌ಬಿಪಿ 2014 ದಿನಾಂಕ:20-05-2014.

4)ಸರ್ಕಾರದ ಪತ್ರ ಸಂಖ್ಯೆ:ಡಿ.ಪಿ.ಎ.ಆರ್186ಎಸ್.ಆರ್.ಎಸ್2018 ಬೆಂಗಳೂರು ದಿ:15-05-2019.

- * * * * * * -

ಕಲಬುರಗಿ ಜಿಲ್ಲೆಯ ವ್ಯಾಪ್ತಿಯ ಸರಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಕನ್ನಡ ಮಾಧ್ಯಮ ವೃಂದದ ದಿನಾಂಕ: 01-01-2020 ರಲ್ಲಿದ್ದಂತೆ ಮೇರಿಟ್ ಆಧಾರದ ಮೇರೆಗೆ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಸಿದ್ಧಗೊಳಿಸಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಪ್ರಕಟಿಸಲಾಗುತ್ತಿದೆ. ಸದರಿ ಪಟ್ಟಿಗೆ ಆಕ್ಷೇಪಣೆಯನ್ನು ದಿನಾಂಕ:26-02-2020 ರಂದು ಕಛೇರಿ ಅವಧಿವರೆಗೆ ಸಲ್ಲಿಸಲು ಸೂಚಿಸಿದೆ. ಸದರಿ ಪಟ್ಟಿಯನ್ನು ಈ ಕಾರ್ಯಾಲಯದ ವೆಬ್‌ಸೈಟ್ (www.ddpikalaburgi.in)ದಲ್ಲಿ ಗಮನಿಸಬಹುದು.

1) ಮೂಲ ವೃಂದ, ಸ್ಥಳಿಯ ವೃಂದ ಮತ್ತು ಉಳಿದ ಮೂಲ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿನ ಶಿಕ್ಷಕರ ಸೇವಾ ಮಾಹಿತಿಯು ಜಿಲ್ಲೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಒದಗಿಸಿರುವ ಮಾಹಿತಿಯನ್ನಾಧರಿಸಿ ಜೇಷ್ಠತಾ ಪಟ್ಟಿಯಲ್ಲಿ ನಿಗದಿಪಡಿಸಿದಂತೆ ಸಿದ್ಧಪಡಿಸಲಾಗಿದೆ.
2) ಮೂಲ ವೃಂದ, ಸ್ಥಳಿಯ ವೃಂದ ಮತ್ತು ಉಳಿದ ಮೂಲ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿನ ಶಿಕ್ಷಕರ ಸೇವಾ ವಿವರ ಮಾಹಿತಿ ಜನ್ಮ ದಿನಾಂಕ, ಸೇವೆಗೆ ಸೇರಿದ ದಿನಾಂಕ, ವಿದ್ಯಾರ್ಹತೆ, ಮೇರಿಟ್ ಮಾಹಿತಿ, ಜೇಷ್ಠತಾ ರ್‍ಯಾಂಕಿಂಗ್ ವಿವರಗಳು ಮತ್ತು ಜೇಷ್ಠತಾ ಕ್ರಮಾಂಕಗಳ ಪರಿಶೀಲನೆಗೆ ಒಪ್ಪಿಸುವ ಷರತ್ತಿಗೆ ಒಳಪಟ್ಟಿದೆ.
3) ಮೂಲ ವೃಂದ, ಸ್ಥಳಿಯ ವೃಂದ ಮತ್ತು ಉಳಿದ ಮೂಲ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ನಮೂದಿಸಿದಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ದಾಖಲೆಗಳನ್ನು ಪರಿಶೀಲನೆಗೆ ಒಪ್ಪಿಸುವ ಷರತ್ತಿಗೆ ಒಳಪಟ್ಟಿದೆ. ಹಾಗೂ ಈ ಜೇಷ್ಠತಾ ಪಟ್ಟಿಯಲ್ಲಿ ಯಾವುದೇ ತರಹದ ದೋಷಗಳನ್ನು ಕಂಡು ಬಂದಲ್ಲಿ ಅದನ್ನು ಸರಿಪಡಿಸುವ ಅಧಿಕಾರವನ್ನು ಇಲಾಖೆಯು ಕಾಯ್ದಿರಿಸಿಕೊಂಡಿದೆ.
4) ಈ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ನಿಗದಿತ ಅವಧಿಯಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸತಕ್ಕದ್ದು. ಒಂದು ವೇಳೆ ನಿಗದಿತ ಅವಧಿಯಲ್ಲಿ ಆಕ್ಷೇಪಣೆಗಳು ಸಲ್ಲಿಕೆಯಾಗದಿದ್ದಲ್ಲಿ ಈ ಮಾಹಿತಿ ಸರಿಯಿರುವುದು ಎಂದು ಪರಿಗಣಿಸಿ ಹಾಗೂ ಅದಕ್ಕೆ ಸಂಬಂಧಪಟ್ಟ ಶಿಕ್ಷಕರುಗಳು, ಶಾಲಾ ಮುಖ್ಯಸ್ಥರುಗಳು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಜವಾಬ್ದಾರರನ್ನಾಗಿಸಿ ಈ ಪಟ್ಟಿಯನ್ನು ಅಂತಿಮಗೊಳಿಸಲಾಗುವುದು.
5) ಆಕ್ಷೇಪಣೆಯನ್ನು ಸಲ್ಲಿಸುವವರು ಈ ಅಧಿಸೂಚನೆಯೊಂದಿಗೆ ನೀಡಲಾದ ನಮೂನೆಯಲ್ಲಿ ಎಲ್ಲಾ ಅಂಕಣದಲ್ಲಿ ಮಾಹಿತಿ ಭರಿಸಿ, ಮಾಹಿತಿಯನ್ನು ಪುಷ್ಟೀಕರಿಸುವ ದಾಖಲೆಗಳೊಂದಿಗೆ ಸಲ್ಲಿಸುವುದು.
6) ಈ ತಾತ್ಕಾಲಿಕ ಪಟ್ಟಿಯಲ್ಲಿ ಯಾವುದೇ ನಮೂದುಗಳು/ಮಾಹಿತಿ ಸರಿ ಇರದೇ ಇದ್ದಲ್ಲಿ, ಸರಿಪಡಿಸಲು ಪುಷ್ಟೀಕರಿಸುವ ದಾಖಲೆಗಳೊಂದಿಗೆ ಆಕ್ಷೇಪಣೆಗಳನ್ನು ಉಪ ನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ಕಲಬುರಗಿ ಇವರ ವಿಳಾಸಕ್ಕೆ ***ಸ್ಪೀಡ್ ಪೋಸ್ಟ*** ಮೂಲಕ ಅಥವಾ ನೇರವಾಗಿ ಈ ಕಾರ್ಯಾಲಯಕ್ಕೆ ದಿನಾಂಕ:26-02-2020 ರೊಳಗಾಗಿ ತಲುಪುವಂತೆ ಸಲ್ಲಿಸುವುದು. ನಿಗದಿತ ಅವಧಿಯೊಳಗಾಗಿ ಆಕ್ಷೇಪಣೆಗಳನ್ನು ಸಲ್ಲಿಸದೇ ಇದ್ದಲ್ಲಿ ಪ್ರಸ್ತುತ ಪ್ರಕಟಿಸಿದ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿನ ಮಾಹಿತಿ ಸರಿಯೆಂದು ಪರಿಗಣಿಸಿ ಪಟ್ಟಿಯನ್ನು ಅಂತಿಮಗೊಳಿಸಲಾಗುವುದು.

11/2/2020

ಉಪ ನಿರ್ದೇಶಕರು(ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ
ಕಲಬುರಗಿ

ಗೆ,

1) ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
2) ಈ ಕಛೇರಿಯ ಇ-ಗೌರ್‍ನರ್ಸ್‌ಕ್ಕೆ ಕೊಡುತ್ತಾ ಈ ಕಾರ್ಯಾಲಯದಲ್ಲಿ ವೆಬ್‌ಸೈಟ್‌ದಲ್ಲಿ ಪ್ರಕಟಿಸಲು ತಿಳಿಸಿದೆ.

ಪ್ರತಿಯನ್ನು:-

1) ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಶಿಕ್ಷಣ ಇಲಾಖೆಯ ಸಚಿವಾಲಯ ಬಹುಮಹಡಿಗಳ ಕಟ್ಟಡ ಬೆಂಗಳೂರು ಇವರಿಗೆ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.
2) ಮಾನ್ಯ ಆಯುಕ್ತರು ಬೆಂಗಳೂರು ಹಾಗೂ ಕಲಬುರಗಿ ರವರ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.
3) ಮಾನ್ಯ ನಿರ್ದೇಶಕರು ಅಪರ ಆಯುಕ್ತರ ಕಛೇರಿ ಕಲಬುರಗಿ ರವರ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.
4) ಮಾನ್ಯ ಸಹ ನಿರ್ದೇಶಕರು(ಆಡಳಿತ) ಅಪರ ಆಯುಕ್ತರ ಕಛೇರಿ ಕಲಬುರಗಿ ರವರ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.

ಕರ್ನಾಟಕ ಸರ್ಕಾರ

# ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕರು(ಆಡಳಿತ) ರವರ ಕಾರ್ಯಾಲಯ ಕಲಬುರಗಿ

ಸಂಖ್ಯೆ:ಅ1/ಆಡಳಿತ/ಪ್ರಾಶಾಶಿ/ಬಡ್ತಿ/69/2019–20

ದಿನಾಂಕ:11–02–2020

**–: ಸೂಚನಾ ಪತ್ರ :–**

***ಆಕ್ಷೇಪಣೆ ಸಲ್ಲಿಸುವ ಶಿಕ್ಷಕರಿಗೆ ಈ ಕೆಳಗಿನ ಅಂಶಗಳನ್ನು ಪಾಲಿಸಲು ತಿಳಿಸಿದೆ.***

1) ಆಕ್ಷೇಪಣೆಯನ್ನು ಅಧಿಸೂಚನೆಯೊಂದಿಗೆ ಲಗತ್ತಿಸಿದ ನಮೂನೆಯಲ್ಲಿ ಎಲ್ಲಾ ಅಂಕಣದಲ್ಲಿ ಕಡ್ಡಾಯವಾಗಿ ಮಾಹಿತಿ ಭರಿಸಿ, 19 ಅಂಕಣದಲ್ಲಿ ಸರಿಪಡಿಸಬೇಕಾದ ಅಂಗಳನ್ನು ನಮೂದಿಸತಕ್ಕದ್ದು, ಅದಕ್ಕೆ ಪೂರಕ ದಾಳಕೆಗಳನ್ನು ಕೂಡಾ ಸಲ್ಲಿಸುವುದು.
2) ಆಕ್ಷೇಪಣೆಯನ್ನು ಸಲ್ಲಿಸುವಾಗ ನನಗಿಂತ ಕಿರಿಯರು ಮೇಲೆ ಬಂದಿದ್ದಾರೆಂದು ಅಂದಾಜಿನ ಮೇಲೆ ಆಕ್ಷೇಪಣೆಯನ್ನು ಸಲ್ಲಿಸಿದ್ದಲ್ಲಿ ಪರಿಗಣಿಸುವುದಿಲ್ಲ. ಆಕ್ಷೇಪಣೆ ಸಲ್ಲಿಸುವ ಶಿಕ್ಷಕರ ಮತ್ತು ತಮಗಿಂತ ಕಿರಿಯ ಶಿಕ್ಷಕರು ಮೇಲೆ ಬಂದಿದ್ದಾರೆಂದು ಆಕ್ಷೇಪಿಸಲಾದ ಶಿಕ್ಷಕರ ನಿಖರವಾದ ಸೇವಾ ವಿವರಗಳನ್ನು ಮತ್ತು ಪುಷ್ಠೀಕರಿಸುವ ದಾಖಲೆಗಳೊಂದಿಗೆ ತಪ್ಪದೇ ಈ ಅಧಿಸೂಚನೆಯೊಂದಿಗೆ ಲಗತ್ತಿಸಿದ ನಮೂನೆಯಲ್ಲಿ ಎಲ್ಲಾ ಅಂಕಣದಲ್ಲಿ ಕಡ್ಡಾಯವಾಗಿ ಮಾಹಿತಿ ಭರಿಸಿ, 19 ಅಂಕಣದಲ್ಲಿ ಸರಿಪಡಿಸಬೇಕಾದ ಅಂಶಗಳನ್ನು ನಮೂದಿಸಿ ಸಲ್ಲಿಸುವುದು.
3) ಆಕ್ಷೇಪಣೆಯನ್ನು ಈ ಕಾರ್ಯಾಲಯದ ವಿಳಾಸಕ್ಕೆ ಉಪ ನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ಕಲಬುರಗಿ ಇವರ ವಿಳಾಸಕ್ಕೆ ಸ್ಪೀಡ್ ಪೋಸ್ಟ ಮೂಲಕ ಇಲ್ಲವೇ ನೇರವಾಗಿ ಈ ಕಾರ್ಯಾಲಯಕ್ಕೆ ಸಲ್ಲಿಸುವುದು.
4) ಆಕ್ಷೇಪಣೆಯನ್ನು ದಿನಾಂಕ:26–02–2020 ರೊಳಗಾಗಿ ಈ ಕಾರ್ಯಾಲಯಕ್ಕೆ ತಲುಪುವಂತೆ ಸಲ್ಲಿಸುವುದು. ಅವಧಿಯೋಳಗೆ ಬಂದ ಆಕ್ಷೇಪಣೆಗಳನ್ನು ಮಾತ್ರ ಪರಿಶೀಲಿಸಲಾಗುವುದು.
5) ದಿನಾಂಕ:26–02–2020 ರೊಳಗಾಗಿ ತಲುಪುವಂತೆ ಆಕ್ಷೇಪಣೆಗಳನ್ನು ಸಲ್ಲಿಸದೇ ಇದ್ದಲ್ಲಿ ಆಯಾ ಶಿಕ್ಷಕರ ಮತ್ತು ಆಯಾ ಶಾಲಾ ಮುಖ್ಯಸ್ಥರ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ವೈಯಕ್ತಿಕ ಜವಾಬ್ದಾರಿಯ ಮೇರೆಗೆ ಮತ್ತು ಪ್ರಸ್ತುತ ಪ್ರಕಟಿಸಲಾದ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿನ ಸೇವಾ ವಿವರಗಳು ಸರಿಯಿರುತ್ತವೆಯೆಂದು ಪರಿಗಣಿಸಿ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಲಾಗುವುದು.

11/2/2020

ಉಪ ನಿರ್ದೇಶಕರು(ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ
ಕಲಬುರಗಿ

## ಆಕ್ಷೇಪಣೆ ಸಲ್ಲಿಸುವ ನಮೂನೆ

(ವಿಸೂ: ಆಕ್ಷೇಪಣೆಯನ್ನು ಸ್ಪೀಡ್ ಪೋಸ್ಟ ಮೂಲಕ ಅಥವಾ ನೇರವಾಗಿ ಸಲ್ಲಿಸುವುದು)

ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸೇವಾ ವಿವರ

| | | | | |
|---|---|---|---|---|
| 1 | ಶಿಕ್ಷಕರ ಹೆಸರು | | | |
| 2 | ಮೋಬೈಲ್ ಸಂಖ್ಯೆ | | | |
| 3 | ಈಗಾಗಲೇ ಪ್ರಕಟಿಸಲಾದ ಜೇಷ್ಠತಾ ಪಟ್ಟಿಯಲ್ಲಿ ನಮೂದಿಸಿದ KGID ಸಂಖ್ಯೆ | | | |
| 4 | ಈಗಾಗಲೇ ಜೇಷ್ಠತಾ ಪಟ್ಟಿಯಲ್ಲಿ ನಮೂದಿಸಿದ KGID ಸಂಖ್ಯೆ ಮೊದಲನೆಯ KGID ಸಂಖ್ಯೆ ಆಗಿರದಿದ್ದಲ್ಲಿ ಮೊದಲ KGID ಸಂಖ್ಯೆ ನಮೂದಿಸುವುದು. | | | |
| 5 | ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಶಾಲೆಯ ವಿಳಾಸ | ಸರಕಾರಿ ಪ್ರಾಥಮಿಕ ಶಾಲೆ | ಗ್ರಾಮ | ತಾಲ್ಲೂಕು |
| | | | | |
| 6 | ನೇಮಕಾತಿ ಆದೇಶ ಸಂಖ್ಯೆ | | | |
| 7 | ಆಯ್ಕೆ ವಿಧಾನ | | | |
| 8 | ನೇಮಕಾತಿ ಯಾವ ಪಂಗಡ/ಜಾತಿಯಲ್ಲಿ ಆಗಿರುವರು | ಸಾಮಾನ್ಯ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ |
| | | | | |
| 9 | ನೇಮಕಾತಿಗೊಂಡ ವಿಷಯ/ಮಾಧ್ಯಮ | | | |
| 10 | ನೇಮಕಾತಿಗೊಂಡ ಹುದ್ದೆಯ ಪದನಾಮ | | | |
| 11 | ಸೇವೆಗೆ ಸೇರಿದ ದಿನಾಂಕ | | | |
| 12 | ಸೇವಾ ಸಕ್ರಮಗೊಂಡ ದಿನಾಂಕ | | | |
| 13 | ಸೇವಾ ಪುಸ್ತಕದಲ್ಲಿ ಇರುವಂತೆ ಸ್ವಂತ ಊರು | ಸ್ವಂತ ಊರು | ತಾಲ್ಲೂಕು | ಜಿಲ್ಲೆ |
| | | | | |
| 14 | ದಿನಾಂಕ:01–01–2015ರಇದ್ದಂತೆ ಸ್ಥಳೀಯ ವೃಂದ/ಉಳಿದ ಮೂಲ ವೃಂದಲ್ಲಿ ಇರಲು ಬಯಸಿದ ಬಗ್ಗೆ ಅಭಿಮತ ಪತ್ರದಂತೆ | ಸ್ಥಳಿಯ ವೃಂದದಲ್ಲಿ ಇರಲು ಬಯಸಲಾಗಿದೆ(ಹೆಚ್.ಕೆ) | ಉಳಿದ ಮೂಲ ವೃಂದದಲ್ಲಿ ಇರಲು ಬಯಸಲಾಗಿದೆ(ಎನ್.ಹೆಚ್.ಕೆ) | |
| | | | | |
| 15 | ನೇಮಕಾತಿ ಆಯ್ಕೆ ಪಟಿಯಲ್ಲಿರುವಂತೆ ಮೇರಿಟ್ (ಆದೇಶ ಪತ್ರದೊಂದಿಗೆ) | | | |
| 16 | ನೇಮಕಾತಿ ಆಯ್ಕೆ ಪಟ್ಟಿಯಲ್ಲಿರುವಂತೆ ನೇಮಕಾತಿ ರ್‍ಯಾಂಕಿಂಗ ಸಂಖ್ಯೆ(ಆದೇಶ ಪತ್ರದೊಂದಿಗೆ) | | | |
| 17 | ಆಯ್ಕೆಯ ರಜಿಸ್ಟರ ನಂಬರ | | | |

| | | |
|---|---|---|
| 18 | ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ಕಂಡುಬಂದ ನಮೂದುಗಳು ಹಾಗೂ ಸರಿಪಡಿಸಬೇಕಾದ ಅಂಶಗಳು. | |
| 19 | ಷರಾ | |
| 20 | ಶಿಕ್ಷಕರ ರುಜು | |